3) ಜಿಲ್ಲಾಧಿಕಾರಿಗಳ ಕಾರ್ಯಲಯ, ಬಾಗಲಕೋಟೆ ಜಿಲ್ಲೆ ರವರ ಪತ್ರ ದಿನಾಂಕ: 30.07.2014.

ಪ್ರಸ್ತಾವನೆ:–

ಬಾಗಲಕೋಟೆ ಜಿಲ್ಲೆಯ, ಜಮಖಂಡಿ ಕಂದಾಯ ತಾಲ್ಲೂಕಿಗೆ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವಂತೆ ಕೋರಿ ಸಾರ್ವಜನಿಕರಿಂದ ಸರ್ಕಾರಕ್ಕೆ ಮನವಿಗಳು ಸ್ವೀಕೃತವಾಗಿದ್ದು, ಅದರಂತೆ, ಮೇಲೆ ಓದಲಾದ (1)ರ ದಿನಾಂಕ: 31.08.2013ರ ಪತ್ರದಲ್ಲಿ ಜಮಖಂಡಿ ಕಂದಾಯ ತಾಲ್ಲೂಕಿನಲ್ಲಿ ಹಾಲಿ ಇರುವ 04 ನೋಟರಿಗಳಿಗೆ ಹೆಚ್ಚಿನ ಕೆಲಸದ ಒತ್ತಡವಿರುವ ಬಗ್ಗೆ ಹಾಗೂ ಇನ್ನೂ ಹೆಚ್ಚುವರಿ ಒಂದು ಹುದ್ದೆಯನ್ನು ಸೃಜಿಸುವ ಅವಶ್ಯಕತೆ ಇದೆಯೇ ಎಂಬ ಬಗ್ಗೆ ಸಮರ್ಥನೀಯ ವಿವರಣೆಯನ್ನು ಒದಗಿಸುವಂತೆ, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಜಿಲ್ಲೆ ಮತ್ತು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರುಗಳನ್ನು ಕೋರಲಾಗಿತ್ತು.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಜಿಲ್ಲೆ ಇವರು ಮೇಲೆ ಓದಲಾದ (2)ರ ದಿನಾಂಕ:19.5.2014ರ ಪತ್ರದಲ್ಲಿ ರಾಜ್ಯ ಸರ್ಕಾರದಿಂದ ನೇಮಕಗೊಂಡ 4 ನೋಟರಿಗಳು ಮತ್ತು ಕೇಂದ್ರ ಸರ್ಕಾರದಿಂದ ನೇಮಕಗೊಂಡ ಒಬ್ಬ ನೋಟರಿಯವರಿದ್ದು, ಜಮಖಂಡಿ ನಗರ ಹಾಗೂ ಗ್ರಾಮೀಣ ಪ್ರದೇಶದ ಒಟ್ಟು ಜನಸಂಖ್ಯೆ ಸುಮಾರು 3 ಲಕ್ಷಕ್ಕೂ ಮೇಲ್ಪಟ್ಟು ಇರುತ್ತದೆ. ಸದರಿ ಜನಸಂಖ್ಯೆಗೆ ಅನುಗುಣವಾಗಿ ಹಾಲಿ ಕೆಲಸ ಮಾಡುತ್ತಿರುವ ನೋಟರಿಗಳ ಸಂಖ್ಯೆ ಕಡಿಮೆ ಇದ್ದು, ಸದರಿ ಕಾರಣಗಳಿಂದ ಸಾರ್ವಜನಿಕರ ಅನುಕೂಲಕ್ಕಾಗಿ ನೋಟರಿ ಹುದ್ದೆಗಳನ್ನು ಸೃಜಿಸುವ ಅವಶ್ಯಕತೆ ಇರುತ್ತದೆಂದು ವರದಿ ನೀಡಿರುತ್ತಾರೆ.

ಅದರಂತೆ, ಅಪರ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರು, ತಹಶೀಲ್ದಾರರ ಕಾರ್ಯಾಲಯ, ಜಮಖಂಡಿ ಇವರ ದಿ:04.7.2014ರ ಪತ್ರದಲ್ಲಿ ಜಮಖಂಡಿ ತಾಲ್ಲೂಕಿನ ಎಲ್ಲಾ ಗ್ರಾಮದ ವಿದ್ಯಾರ್ಥಿಗಳು ಶೇಕಡಾ 90ರಷ್ಟು ಜಮಖಂಡಿಯಲ್ಲಿ ವಿದ್ಯಾರ್ಜನೆಗಾಗಿ ಬರುತ್ತಿದ್ದು, ಎಲ್ಲಾ ಸರ್ಕಾರಿ, ಅರೆ ಸರ್ಕಾರಿ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳು ಜಾತಿ ಇತರೆ ಸರ್ಟಿಫಿಕೇಟಿಗೊಸ್ಕರ ಹಾಗೂ ಇನ್ನುಳಿದ ಪ್ರಮಾಣ ಪತ್ರಗಳಿಗೆ ನೋಟರಿ ಅವಶ್ಯಕತೆಯಿರುವುದರಿಂದ, ಹೆಚ್ಚುವರಿ ನೋಟರಿ ಹುದ್ದೆ ಸೃಜಿಸುವ ಅವಶ್ಯಕತೆ ಎಂದು ಅಭಿಪ್ರಾಯಪಟ್ಟಿರುವುದನ್ನು ಒಪ್ಪಿ ಮೇಲೆ (3)ರಲ್ಲಿ ಓದಲಾದ ದಿನಾಂಕ:30.07.2014ರ ಪತ್ರದೊಂದಿಗೆ ಜಮಖಂಡಿ ಕಂದಾಯ ತಾಲ್ಲೂಕಿಗೆ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಬಹುದೆಂದು ವರದಿ ನೀಡಿರುತ್ತಾರೆ.

ಮೇಲಿನ ವರದಿಗಳನ್ನು ಸರ್ಕಾರವು ಪರಿಶೀಲಿಸಿದೆ, ಅದರಂತೆ, ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಲಾ 137 ಎಲ್‌ಸಿಎಲ್ 2013, ಬೆಂಗಳೂರು, ದಿನಾಂಕ: 26.09.2014.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಬಾಗಲಕೋಟೆ ಜಿಲ್ಲೆಯ ಜಮಖಂಡಿ ಕಂದಾಯ ತಾಲ್ಲೂಕಿಗೆ ಸಾರ್ವಜನಿಕರ ಹಿತದೃಷ್ಟಿಯಿಂದ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಜೆ.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ)
ಕಾನೂನು ಇಲಾಖೆ,(ಆಡಳಿತ–2)

PR.741
SC.25

ಕಾನೂನು ಸಚಿವಾಲಯ

ವಿಷಯ : ಶೋರಾಪುರ ಕಂದಾಯ ತಾಲ್ಲೂಕು, ಯಾದಗಿರಿ ಜಿಲ್ಲೆ ಇಲ್ಲಿಗೆ ಒಂದು ಹೆಚ್ಚುವರಿ ನೋಟರಿ ಹುದ್ದೆ ಸೃಜಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಪತ್ರ ಸಂಖ್ಯೆ: ಲಾ 204 ಎಲ್‌ಸಿಎಲ್ 2014, ದಿನಾಂಕ: 30.05.2014.
2) ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ ಜಿಲ್ಲೆ ರವರ ಪತ್ರ ದಿನಾಂಕ: 19.5.2014.
3) ಜಿಲ್ಲಾಧಿಕಾರಿಗಳ ಕಾರ್ಯಲಯ, ಯಾದಗಿರಿ ಜಿಲ್ಲೆ ರವರ ಪತ್ರ ದಿನಾಂಕ: 30.07.2014.

ಪ್ರಸ್ತಾವನೆ:–

ಯಾದಗಿರಿ ಜಿಲ್ಲೆಯ, ಶೋರಾಪುರ ಕಂದಾಯ ತಾಲ್ಲೂಕಿಗೆ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವಂತೆ ಸರ್ಕಾರವು ತೀರ್ಮಾನಿಸಿದ್ದು, ಅದರಂತೆ, ಮೇಲೆ ಓದಲಾದ (1)ರ ದಿನಾಂಕ: 30.05.2014ರ ಪತ್ರದಲ್ಲಿ ಶೋರಾಪುರ ಕಂದಾಯ ತಾಲ್ಲೂಕಿನಲ್ಲಿ ಹಾಲಿ ಇರುವ 03 ನೋಟರಿಗಳಿಗೆ ಹೆಚ್ಚಿನ ಕೆಲಸದ ಒತ್ತಡವಿರುವ ಬಗ್ಗೆ ಹಾಗೂ ಇನ್ನೂ ಹೆಚ್ಚುವರಿ ಒಂದು ಹುದ್ದೆಯನ್ನು ಸೃಜಿಸುವ ಅವಶ್ಯಕತೆ ಇದೆಯೇ ಎಂಬ ಬಗ್ಗೆ ಸಮರ್ಥನೀಯ ವಿವರಣೆಯನ್ನು ಒದಗಿಸುವಂತೆ, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ ಜಿಲ್ಲೆ ಮತ್ತು ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ ಇವರುಗಳನ್ನು ಕೋರಲಾಗಿತ್ತು.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ ಜಿಲ್ಲೆ ಇವರು, ಅಧ್ಯಕ್ಷರು, ತಾಲ್ಲೂಕು ನ್ಯಾಯವಾದಿಗಳ ಸಂಘ. ಶೋರಾಪುರ ಇವರ ಮನವಿ ಪತ್ರದನ್ವಯ ಶೋರಾಪುರ ತಲ್ಲೂಕಿನಲ್ಲಿ 186 ಹಳ್ಳಿಗಳು, 05 ಕಂದಾಯ ಹೋಬಳಿಗಳು, 05 ಪೋಲೀಸ್ ಸ್ಟೇಷನ್‌ಗಳು, 05 ಪದವಿ ಕಾಲೇಜುಗಳು, 45 ಪ್ರೌಢ ಶಾಲೆಗಳು, 349 ಪ್ರಾಥಮಿಕ ಶಾಲೆಗಳು ಹಾಗೂ 42 ಗ್ರಾಮ ಪಂಚಾಯತಿಗಳು ಇದ್ದು, ಸದರಿ ತಾಲ್ಲೂಕಿನ ಕಾರ್ಯಕ್ಷೇತ್ರವು ವಿಶಾಲವಾಗಿರುವುದರಿಂದ, ಸದರಿ ಶೋರಾಪುರ ಕಂದಾಯ ತಾಲ್ಲೂಕಿಗೆ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಬಹುದೆಂದು ಅಭಿಪ್ರಾಯ ತಿಳಿಸಿರುತ್ತಾರೆ.

ಅದರಂತೆ, ಅಪರ ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ ಇವರು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ ಜಿಲ್ಲೆ ಇವರ ದಿ:15.7.2014ರ ಪತ್ರದ ನಿರ್ಣಯದಂತೆ ಅಭಿಪ್ರಾಯ ವ್ಯಕ್ತಪಡಿಸುತ್ತಾ, ಮೇಲೆ (3)ರಲ್ಲಿ ಓದಲಾದ ದಿನಾಂಕ:30.07.2014ರ ಪತ್ರದೊಂದಿಗೆ ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ ಇವರು, ಶೋರಾಪುರ ಕಂದಾಯ ತಾಲ್ಲೂಕಿಗೆ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಬಹುದೆಂದು ವರದಿ ತಿಳಿಸಿರುತ್ತಾರೆ.

ಮೇಲಿನ ವರದಿಗಳನ್ನು ಸರ್ಕಾರವು ಪರಿಶೀಲಿಸಿದೆ, ಅದರಂತೆ, ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಲಾ 204 ಎಲ್‌ಸಿಎಲ್ 2014, ಬೆಂಗಳೂರು, ದಿನಾಂಕ: 26.09.2014.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಯಾದಗಿರಿ ಜಿಲ್ಲೆಯ ಶೋರಾಪುರ ಕಂದಾಯ ತಾಲ್ಲೂಕಿಗೆ ಸಾರ್ವಜನಿಕರ ಹಿತದೃಷ್ಟಿಯಿಂದ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಜೆ.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ)
ಕಾನೂನು ಇಲಾಖೆ,(ಆಡಳಿತ–2)

PR.742
SC.25

ಕಾನೂನು ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ವಕೀಲರ ಕಲ್ಯಾಣ ನಿಧಿಗೆ **2014–15**ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಲಾ73 ಎಲ್‌ಎಎಂ 2014, ದಿನಾಂಕ: 30.04.2014.
2) ಅಧ್ಯಕ್ಷರು, ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, ಇವರ ಪತ್ರದ ದಿ: 10.06.2014.
3) ಆಡಳಿತಾಧಿಕಾರಿಗಳು, ಅಡ್ವೊಕೇಟ್ ಜನರಲ್ ಕಚೇರಿ, ಇವರ ಪತ್ರ ದಿ:13.08.2014.

ಪ್ರಸ್ತಾವನೆ:–

ಕರ್ನಾಟಕ ರಾಜ್ಯ ವಕೀಲರ ಕ್ಷೇಮಾಭಿವೃದ್ಧಿ ನಿಧಿಗೆ **2014–15**ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2014–00–114–0–03(ಯೋಜನೆ)ಯಡಿ ರೂ.200 ಲಕ್ಷ ಆಯವ್ಯಯ ಅವಕಾಶವಿದ್ದು, ಮುಂದುವರಿದ ಯೋಜನೆಯಡಿ ಸದರಿ ಯೋಜನೆಯನ್ನು ಮುಂದುವರಿಸಲು ಮೇಲೆ (1)ರಲ್ಲಿ ಓದಲಾದ ದಿ:30.04.2014ರ ಆದೇಶದಲ್ಲಿ ಮಂಜೂರಾತಿ ನೀಡಿದೆ.

ಮೇಲೆ (3)ರಲ್ಲಿ ಓದಲಾದ ದಿ:13.08.2014ರ ಪತ್ರದಲ್ಲಿ ಆಡಳಿತಾಧಿಕಾರಿಗಳು, ಅಡ್ವೋಕೇಟ್ ಜನರಲ್ ಕಚೇರಿ ಇವರು, ರಾಜ್ಯ ವಕೀಲರ ಪರಿಷತ್ತಿನ ಅಧ್ಯಕ್ಷರು, ಮರಣ ಪರಿಹಾರಕ್ಕಾಗಿ **21** ಅರ್ಜಿಗಳು, ನಿವೃತ್ತಿ ಪರಿಹಾರಕ್ಕೆ 2 ಅರ್ಜಿಗಳು ಹಾಗೂ ವೈದ್ಯಕೀಯ ಪರಿಹಾರಕ್ಕಾಗಿ **8** ಅರ್ಜಿಗಳು ಬಾಕಿ ಇರುವುದಾಗಿ ತಿಳಿಸುತ್ತಾ, ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿಗೆ ವಕೀಲರ ಕ್ಷೇಮಾಭಿವೃದ್ಧಿ ನಿಧಿಗಾಗಿ ಮೇಲ್ಕಂಡ ಯೋಜನೆಯಡಿ ಒದಗಿಸಿರುವ ಅನುದಾನದಿಂದ ಮೊದಲನೆ ಕಂತಾಗಿ ರೂ. **100** ಲಕ್ಷ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ 304 ಎಲ್‌ಸಿಎಲ್ 2014, ಬೆಂಗಳೂರು, ದಿನಾಂಕ: 18.09.2014.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, 2014–15ನೇ ಸಾಲಿನ ಪರಿಷ್ಕೃತ ಆಯವ್ಯಯ ಲೆಕ್ಕ ಶೀರ್ಷಿಕೆ **2014–00–114–0–03(ಯೋಜನೆ)** ವಕೀಲರ ಕಲ್ಯಾಣ ನಿಧಿ ಅಂಶದಾನಗಳು ಕಾರ್ಯಕ್ರಮದಡಿಯಲ್ಲಿ ಪ್ರಥಮ ಕಂತಾಗಿ ರೂ.100.00 ಲಕ್ಷಗಳನ್ನು (ರೂಪಾಯಿ ನೂರು ಲಕ್ಷಗಳು ಮಾತ್ರ) ವಕೀಲರ ನಿವೃತ್ತಿ ಪರಿಹಾರ, ಮರಣ ಪರಿಹಾರ ಹಾಗೂ ವೈದ್ಯಕೀಯ ಪರಿಹಾರ ನೀಡಲು ಈ ಕೆಳಕಂಡ ಷರತ್ತಿಗೊಳಪಟ್ಟು ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಹಣವನ್ನು ವಕೀಲರ ಸಂಘಗಳಿಗೆ ಸಹಾಯಾನುದಾನ ನಿಯಮಾವಳಿಯಲ್ಲಿ ಸ್ಪಷ್ಟಪಡಿಸಿರುವಂತೆ ವಕೀಲರ ಪರಿಷತ್ತು, ಅಡ್ವೋಕೇಟ್ ಜನರಲ್, ಕರ್ನಾಟಕ ಉಚ್ಛ ನ್ಯಾಯಾಲಯರವರಿಗೆ ಬಿಲ್ಲನ್ನು ಸಲ್ಲಿಸಿ ಹಣ ಪಾವತಿಸಿಕೊಳ್ಳಬಹುದಾಗಿರುತ್ತದೆ.

1. ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು.
2. ಈ ಲೆಕ್ಕ ಶೀರ್ಷಿಕೆಯಲ್ಲಿ ಬಿಡುಗಡೆ ಮಾಡಿದ ಒಟ್ಟು ರೂ.**100** ಲಕ್ಷಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, ಬೆಂಗಳೂರು ರವರು ಅಂಕಿ–ಅಂಶಗಳ ಸಹಿತ ಕಾಲಮಿತಿಯೊಳಗೆ ನಿಯಮಾನುಸಾರ ಅಡ್ವೋಕೇಟ್ ಜನರಲ್‌ರವರ ಮೇಲುರುಜು ಪಡೆದು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

   ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ವಇಇ **471** ಆಂಆಬಿ **2013, ದಿ:01.09.2014**ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಜೆ.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ–2)(ಪ್ರ)
ಕಾನೂನು ಇಲಾಖೆ

PR.743
SC.15

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ ಪರಾಮರ್ಶೆ ಕೈಗೊಳ್ಳುವ ತಜ್ಞರಿಗೆ ಒಂದು ಜಿಲ್ಲೆಗೆ ರೂ. 2000/–ಗಳ ಸಂಭಾವನೆಯನ್ನು ನೀಡುವ ಬಗ್ಗೆ.

ಪ್ರಸ್ತಾವನೆ:–

ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳು ಕರಡು ರೂಪದಲ್ಲಿದ್ದು, ಅವುಗಳನ್ನು ಅಂತಿಮಗೊಳಿಸುವ ಮುನ್ನ ಅವುಗಳ ಗುಣಮಟ್ಟವನ್ನು ಉತ್ತಮಪಡಿಸುವಂತೆ ನೋಡಿಕೊಳ್ಳಲು ತಜ್ಞರಿಂದ (Prior review) ಪರಾಮರ್ಶಿಸುವುದು ಅತೀ ಅವಶ್ಯಕವಾಗಿದೆ. ಈ ವಿಷಯದಲ್ಲಿ ಅನುಭವವುಳ್ಳವರನ್ನು

ನೇಮಿಸುವುದು ಸಹ ಅನಿವಾರ್ಯವಾಗಿರುತ್ತದೆ. ಈ ಹಿಂದೆ ಇಂತಹುದೇ ಜವಾಬ್ದಾರಿಯನ್ನು ನಿರ್ವಹಿಸಲು ಗುಣಮಟ್ಟ ಮೇಲ್ವಿಚಾರಣಾ ಸಮಿತಿಯ ಸದಸ್ಯರನ್ನು ನೇಮಿಸಿ ನಿರ್ದಿಷ್ಟವಾದ ಜಿಲ್ಲೆಗಳನ್ನು ನೀಡಲಾಗಿತ್ತು. ಈ ಕೆಲಸಕ್ಕೂ ಅವರನ್ನೇ ನೇಮಿಸಿ, ಈ ಹಿಂದೆ ವಹಿಸಿದ ಜಿಲ್ಲೆಗಳನ್ನು ಬಿಟ್ಟು ಉಳಿದ ಜಿಲ್ಲೆಗಳನ್ನು ನೀಡಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಪಿಡಿ 73 ಪಿಎಸ್‌ಡಿ 2014, ಬೆಂಗಳೂರು, ದಿನಾಂಕ:26–08–2014.

ಪರಾಮರ್ಶ ತಜ್ಞರು ಮತ್ತು ಅವರುಗಳಿಗೆ ನೀಡಿದ ಜಿಲ್ಲಾ ವರದಿಗಳ ವಿವರಗಳು ಈ ಕೆಳಕಂಡಂತಿವೆ:

1.	ಪ್ರೊ.ಎಸ್. ಮಾದೇಶ್ವರನ್, ಸಲಹೆಗಾರರು, ಯೋಜನಾ ಇಲಾಖೆ	1. ಬಳ್ಳಾರಿ 2. ವಿಜಾಪುರ 3. ಕಲಬುರಗಿ 4. ಬೀದರ್ 5. ಯಾದಗಿರ್
2.	ಪ್ರೊ. ಜೇಮ್ಸ್, ಮುಖ್ಯಸ್ಥರು, ಜನಸಂಖ್ಯಾ ಅಧ್ಯಯನ ವಿಭಾಗ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ನಾಗರಬಾವಿ, ಬೆಂಗಳೂರು	1. ಬೆಳಗಾವಿ 2. ಹಾಸನ 3. ಹಾವೇರಿ 4. ಗದಗ
3.	ಡಾ. ಬಿ.ಪಿ. ವಾಣಿ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ನಾಗರಬಾವಿ, ಬೆಂಗಳೂರು.	1. ಚಾಮರಾಜನಗರ 2. ಮಂಡ್ಯ 3. ಉಡುಪಿ 4. ದಕ್ಷಿಣ ಕನ್ನಡ
4.	ಡಾ. ಜಿ.ಎಸ್. ಗಣೇಶ್ ಪ್ರಸಾದ್, ಬೋಧಕರು, ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು.	1. ಉತ್ತರ ಕನ್ನಡ 2. ಕೊಪ್ಪಳ 3. ಬೆಂಗಳೂರು (ನಗರ) 4. ಬಾಗಲಕೋಟೆ 5. ಬೆಂಗಳೂರು(ಗ್ರಾಮಾಂತರ)
5.	ಪ್ರೊ. ಟಿ.ಆರ್. ಚಂದ್ರಶೇಖರ್, ನಂ. 340/1, ವಚನ ಸೊಸೈಟಿ ರಸ್ತೆ, ಅಮರಾವತಿ, ಹೊಸಪೇಟೆ–583201	1. ಮೈಸೂರು 2. ಚಿಕ್ಕಮಗಳೂರು 3. ಶಿವಮೊಗ್ಗ 4. ತುಮಕೂರು
6.	ಪ್ರೊ. ನಾರಾಯಣ ಶಾಸ್ತ್ರಿ, ಸಮಾಲೋಚಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಆಡಳಿತ ತರಬೇತಿ ಸಂಸ್ಥೆ ಆವರಣ ಮೈಸೂರು.	1. ಚಿಕ್ಕಬಳ್ಳಾಪುರ 2. ರಾಮನಗರ 3. ಕೊಡಗು 4. ಕೋಲಾರ
7.	ಪ್ರೊ. ಆರ್.ಎನ್. ಅಚ್ಯುತ, ಮೈಸೂರು.	1. ಚಿತ್ರದುರ್ಗ 2. ರಾಯಚೂರು 3. ಧಾರವಾಡ 4. ದಾವಣಗೆರೆ

ಪರಾಮರ್ಶೆ ಕೈಗೊಳ್ಳುವ ತಜ್ಞರಿಗೆ ಪ್ರತಿ ಜಿಲ್ಲೆಗೆ ರೂ. 2000/–(ರೂ. ಎರಡು ಸಾವಿರಗಳು ಮಾತ್ರ) ಸಂಭಾವನೆಯನ್ನು ಒದಗಿಸಲು ಆದೇಶಿಸಲಾಗಿದೆ. ನಂತರ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ಅಂತಿಮಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ತಜ್ಞರಿಂದ ಪರಾಮರ್ಶಿಸಬೇಕಾದ ಅಂಶಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ ವೆಚ್ಚವನ್ನು 2014–15ನೇ ಸಾಲಿನಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಲೆಕ್ಕ ಶೀರ್ಷಿಕೆ:2515–00–101–0–26–(ಯೋಜನೆ)ರಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರಫೀ ಅಹಮದ್ ಎಂ.ಎಸ್

ಸರ್ಕಾರದ ಅಧೀನ ಕಾರ್ಯದರ್ಶಿ–1&2,

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಅನುಬಂಧ

1) ಲೀಡ್ ಏಜೆನ್ಸಿಯವರು ಸಂಬಂಧಪಟ್ಟ ತಜ್ಞರೊಂದಿಗೆ ನೇರವಾಗಿ ಸಂಪರ್ಕದಲ್ಲಿರಬೇಕು.

2) ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳೆರಡಲ್ಲೂ ಸಿದ್ಧಪಡಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು.

3) ವರದಿಗಳು ಎರಡು ಭಾಗಗಳಲ್ಲಿರಬೇಕು,

ಭಾಗ(1) – ಸಾರಾಂಶ

ಭಾಗ(2) – ಉಳಿದ 12 ಅಧ್ಯಾಯಗಳು

4) ಅಧ್ಯಾಯ ಕ್ರಮ/ತರಬೇತಿ / ಮಾರ್ಗಸೂಚಿ/ಆಗಿಂದಾಗ್ಗೆ ನೀಡಿರುವ ಸೂಚನೆಗಳನ್ವಯ ತಯಾರಿಸಲ್ಪಟ್ಟಿವೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು.

5) ಅಂಕಿ–ಅಂಶಗಳು ಹಾಗೂ ಸೂಚ್ಯಂಕಗಳ ಗುಣಮಟ್ಟ ತಾಂತ್ರಿಕವಾಗಿ ಸರಿಯಾಗಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು.

6) ವಿಷಯ ಮಂಡನೆ ಸರಳವಾಗಿ ಅರ್ಥವಾಗುವಂತಿರಬೇಕು.

7) ಫೋಟೋ, ಚಾರ್ಟ್, ನಕಾಶೆ, ಭೂಪಟ, ಹರಿವು ನಕ್ಷೆ (Folw chart), ರಾಡಾರ್ ಗ್ರಾಫ್ಸ್‌ಗಳನ್ನು ಸೂಕ್ತ ಸ್ಥಳಗಳಲ್ಲಿ ಉಪಯೋಗಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು.

8) ಸ್ಥಳೀಯ ತಜ್ಞರು ಸಲಹೆ, ಸೂಚನೆ ಪಡೆಯಲಾಗಿದೆಯೇ ಎಂಬುದರ ಬಗ್ಗೆ ಧೃಢೀಕರಿಸಿಕೊಳ್ಳಬೇಕು.

9) ಕಾರ್ಯಾಗಾರ ಮತ್ತು ಜಿಲ್ಲಾ ಕೋರ್ ಸಮಿತಿಯ ಸಭೆಗಳ ಸಂಖ್ಯೆ ಮತ್ತು ದಿನಾಂಕಗಳ ವಿವರಗಳನ್ನು ಸಂಕ್ಷಿಪ್ತವಾಗಿ ನೀಡಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು.

10) ಜಿಲ್ಲಾ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ಸಂದೇಶ/ಮುನ್ನುಡಿ ಮುಂತಾದವುಗಳು ಸಂಕ್ಷಿಪ್ತವಾಗಿ ಬರೆಯಲ್ಪಟ್ಟು ವರದಿಯಲ್ಲಿ ಸೇರಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು.

11) ಅವರು ಕೆಲಸ ನಿರ್ವಹಿಸುತ್ತಿರುವ ಅಥವಾ ವಾಸಸ್ಥಳಕ್ಕೆ ವರದಿಯ ಕರಡನ್ನು (ಸಿ.ಡಿ. ರೂಪದಲ್ಲಿ) ಕಳುಹಿಸಲಾಗುವುದು.

12) ಎಲ್ಲಾ ಜಿಲ್ಲೆಗಳಿಂದ ಕರಡು ವರದಿಗಳು ಸಿ.ಡಿ. ಮತ್ತು ಪುಸ್ತಕ ರೂಪದಲ್ಲಿ ಯೋಜನಾ ಇಲಾಖೆಗೆ ಬಂದ ನಂತರ ಆಗಿಂದಾಗ್ಗೆ ಅವುಗಳನ್ನು ತಜ್ಞರಿಗೆ ಕಳುಹಿಸಿಕೊಡಲಾಗುವುದು.

13) ಪ್ರತಿ ಕರಡನ್ನು ಪರಿಶೀಲಿಸಿ ಒಂದು ವಾರದೊಳಗೆ ಸೂಕ್ತ ಸಲಹೆ ಸೂಚನೆಗಳನ್ನು ನೇರವಾಗಿ ಸಂಬಂಧಪಟ್ಟ ಲೀಡ್ ಏಜೆನ್ಸಿಯವರಿಗೆ ಕಳುಹಿಸಿಕೊಡತಕ್ಕದ್ದು ಹಾಗೂ ಮಾನವ ಅಭಿವೃದ್ಧಿ ವಿಭಾಗಕ್ಕೂ ತಿಳಿಸುವುದು. ಆ ಸಲಹೆ ಸೂಚನೆಗಳನ್ನು ಲೀಡ್ ಏಜೆನ್ಸಿಯವರು ಅನುಸರಿಸುವುದು.

14) ಜಿಲ್ಲಾ ಕೋರ್ ಸಮಿತಿ, ಜಿಲ್ಲಾ ಯೋಜನಾ ಸಮಿತಿ ಹಾಗೂ ಸಂಬಂಧಪಟ್ಟ ಜಿಲ್ಲಾ ಗುಣಮಟ್ಟ ಉಸ್ತವಾರಿ ಸಮಿತಿ ಸದಸ್ಯರು ವರದಿಗಳನ್ನು ಪರಿಶೀಲಿಸಿ ಶಿಫಾರಸ್ಸು ಮಾಡಿದ್ದಾರೆಯೇ? ಮತ್ತು ಕನಿಷ್ಟ ನಾಲ್ಕು ಸೂಕ್ಷ್ಮ ಅಧ್ಯಯನಗಳು ಸೇರಿವೆಯೇ ಎಂಬುದನ್ನು ಪರಿಶೀಲಿಸಬೇಕು.

15) ವರದಿಯ ವಿಸ್ತೀರ್ಣ, ಅಕ್ಷರಗಳ ಗಾತ್ರ ಮುಂತಾದವುಗಳಿಗೆ ಕರ್ನಾಟಕ ರಾಜ್ಯ ಮಾನವ ಅಭಿವೃದ್ಧಿ–2005 ವರದಿಯನ್ನು ಸ್ಥೂಲವಾಗಿ ಅನುಸರಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು.

16) ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳ ಸಂದೇಶಗಳು ಸೇರಿಸಲ್ಪಟ್ಟಿವೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು.

17) ಕೃತಜ್ಞತೆ–ಟಿಪ್ಪಣಿ ಸೇರಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು.

18) ದತ್ತಾಂಶಗಳ ಮಿತಿಯ ಬಗ್ಗೆ ಟಿಪ್ಪಣಿಯನ್ನು ಅನುಬಂಧದಲ್ಲಿ ಸೇರಿಸಲಾಗಿದೆಯೇ ಎಂಬುದನ್ನು ಧೃಢೀಕರಿಕೊಳ್ಳಬೇಕು.

19) ವರದಿ ತಯಾರಿಕಾ ವಿಧಾನವನ್ನು (Processes) ಅನುಬಂಧದಲ್ಲಿ ಸೇರಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು.

20) ದತ್ತಾಂಶಗಳ ಆಕರ ಹಾಗೂ ಆಧಾರ (Sources and References) ಗಳನ್ನು ಅನುಬಂಧದಲ್ಲಿ ಸೇರಿಸಲಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು.

ರಫೀ ಅಹಮದ್ಎಂ.ಎಸ್

PR.744

ಸರ್ಕಾರದ ಅಧೀನ ಕಾರ್ಯದರ್ಶಿ–1&2,

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಶಿವಮೊಗ್ಗಕ್ಕೆ 2014–15ನೇ ಸಾಲಿನ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ:ಯೋಇ 19 ಮಪ್ರಮಂ 2014, ದಿನಾಂಕ:10.06.2014.

2) ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಇವರ ಪತ್ರ ಸಂಖ್ಯೆ:ಮಪ್ರಮಂ:ಶಿ:ನಗದು: ಅನುದಾನ:2014–15, ದಿನಾಮಕ: 20.08.2014.

ಪ್ರಸ್ತಾವನೆ:–

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 2014–15ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ.3800.00 ಲಕ್ಷಗಳನ್ನು ಒದಗಿಸಲಾಗಿದ್ದು, ಓದಲಾದ(1)ರ ಸರ್ಕಾರಿ ಆದೇಶದನ್ವಯ ರೂ.950.00 ಲಕ್ಷಗಳನ್ನು ಪ್ರಥಮ ಕಂತಿನ ಅನುದಾನವಾಗಿ ಬಿಡುಗಡೆಗೊಳಿಸಲಾಗಿದೆ. ವಿವರಗಳು ಈ ಕೆಳಕಂಡಂತಿವೆ.

(ರೂ:ಲಕ್ಷಗಳಲ್ಲಿ)

ಕ್ರ ಸಂ.	ಲೆಕ್ಕಶೀರ್ಷಿಕೆ	ಒದಗಿಸಿರುವ ಅನುದಾನ	ಬಿಡುಗಡೆ ಮಾಡಿರುವ ಪ್ರಥಮ ಕಂತು
1	2515–00–103–0–02–101 (ಸಹಾಯಾನುದಾನ)	115.00	28.750
2	2515–00–103–0–02–132 (ಬಂಡವಾಳ ವೆಚ್ಚ)	2886.24	721.560
3	2515–00–103–0–02–422 (ವಿಶೇಷ ಘಟಕ ಯೋಜನೆ)	549.10	137.275
4	2515–00–103–0–02–423 (ಗಿರಿಜನ ಉಪಯೋಜನೆ)	249.66	62.415
	ಒಟ್ಟು	**3800.00**	**950.000**

ಮೇಲೆ ಓದಲಾದ ಕ್ರಮಸಂಖ್ಯೆ(2)ರ ಪತ್ರದಲ್ಲಿ ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ, ಇವರು 2014–15ನೇ ಸಾಲಿನ ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಯೋಇ 19 ಮಪ್ರಮಂ 2014, ಬೆಂಗಳೂರು, ದಿನಾಂಕ:17.09.2014.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗಕ್ಕೆ 2014–15ನೇ ಸಾಲಿನ ಎರಡನೇ ಕಂತಿನ ಅನುದಾನವಾಗಿ ರೂ. 950.00 ಲಕ್ಷ (ಒಂಭತ್ತು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಡಿ ಬಿಡುಗಡೆ ಮಾಡಿದೆ.

(ರೂ: ಲಕ್ಷಗಳಲ್ಲಿ)

ಕ್ರ ಸಂ.	ಲೆಕ್ಕಶೀರ್ಷಿಕೆ	ಮೊತ್ತ
1	2515–00–103–0–02–101 (ಸಹಾಯಾನುದಾನ)	28.750
2	2515–00–103–0–02–132 (ಬಂಡವಾಳ ವೆಚ್ಚ)	721.560
3	2515–00–103–0–02–422 (ವಿಶೇಷ ಘಟಕ ಯೋಜನೆ)	137.275
4	2515–00–103–0–02–423 (ಗಿರಿಜನ ಉಪಯೋಜನೆ)	62.415
	ಒಟ್ಟು	**950.00**

ಬಿಡುಗಡೆಯಾದ ಈ ಅನುದಾನವನ್ನು ಮಂಡಳಿಯ ಕಾರ್ಯದರ್ಶಿಯವರ ವೈಯಕ್ತಿಕ ಖಾತೆಗೆ ಜಮೆ ಮಾಡಿ, ನಂತರ ಅವಶ್ಯಕತೆಗನುಗುಣವಾಗಿ ಖರ್ಚು ಮಾಡತಕ್ಕದು ಮತ್ತು ನಿಯಮಾನುಸಾರ ಹಣ ಬಳಕೆ ಪ್ರಮಾಣಪತ್ರವನ್ನು ಸರ್ಕಾರಕ್ಕೆ ಸಲ್ಲಿಸುವುದು.

ಪಿಡಿ ಖಾತೆಯಲ್ಲಿ ಲಭ್ಯವಿರುವ ಅನುದಾನ ಮತ್ತು ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನ ಶೇಕಡ 75 ರಷ್ಟನ್ನು ವೆಚ್ಚ ಭರಿಸಿದ ನಂತರ 3ನೇ ಕಂತಿನ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ:ಆಇ 03 ಟಿಎಫ್‌ಪಿ 2014, ದಿನಾಂಕ:04.04.2014 ರಲ್ಲಿ ಆಡಳಿತ ಇಲಾಖೆಯ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ರಫೀ ಅಹಮದ್ ಎಂ.ಎಸ್
ಸರ್ಕಾರದ ಅಧೀನ ಕಾರ್ಯದರ್ಶಿ–1&2,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

PR.745

ಕಾರ್ಮಿಕ ಸಚಿವಾಲಯ

ವಿಷಯ : ಮಂಗಳೂರು ವಿಭಾಗದ ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರ ಹುದ್ದೆಯನ್ನು ಆಡಳಿತಾತ್ಮಕ ಮತ್ತು ಸಾರ್ವಜನಿಕ ಹಿತ ದೃಷ್ಟಿಯಿಂದ ಕಲಬುರಗಿ ವಿಭಾಗಕ್ಕೆ ಮತ್ತು ಕಲಬುರಗಿ ವಿಭಾಗದ ಬಾಯ್ಲರುಗಳ ಸಹಾಯಕ ನಿರ್ದೇಶಕರ ಹುದ್ದೆಯನ್ನು ಮಂಗಳೂರು ವಿಭಾಗಕ್ಕೆ ಸ್ಥಳಾಂತರಿಸುವ ಕುರಿತು.

ಓದಲಾಗಿದೆ : ನಿರ್ದೇಶಕರು, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು, ಇವರ ಪತ್ರ ಸಂ.ಈಎಸ್‌ಟಿ–1/ಆರ್‌ಪಿಪಿ/ಸಿಆರ್–19/2013–14, ದಿನಾಂಕ: 26–12–2013.

ಪ್ರಸ್ತಾವನೆ:–

ಮೇಲೆ ಓದಲಾದ ಪ್ರಸ್ತಾವನೆ ದಿನಾಂಕ: 26–12–2013 ರಲ್ಲಿ ನಿರ್ದೇಶಕರು, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯವರು ಕಲಬುರಗಿ ವಿಭಾಗದಲ್ಲಿ ಅಧಿಕ ಸಂಖ್ಯೆ ಹೈ ಪ್ರೆಶರ್ ಬಾಯ್ಲರುಗಳು ವಿವಿಧ ಕಾರ್ಖಾನೆಗಳಲ್ಲಿ ಸ್ಥಾಪನೆಯಾಗಿದ್ದು ಹಾಗೂ ಸ್ಥಾಪನೆಗೊಳ್ಳುತ್ತಿರುವುದರಿಂದ ಕಲಬುರಗಿ ವಿಭಾಗಕ್ಕೂ ಸಹ ಅನುಭವಿ/ ಪರಿಣಿತಿ ಹೊಂದಿದ ಹಿರಿಯ ಅಧಿಕಾರಿ ಅವಶ್ಯಕತೆ ಕಂಡು ಬರುತ್ತಿದೆ ಎಂದು ತಿಳಿಸಿ,

ಹಾಲಿ ಕಲಬುರಗಿ ವಿಭಾಗಕ್ಕೆ ಹಿರಿಯ ಸಹಾಯಕ ನಿರ್ದೇಶಕರ ಹುದ್ದೆ ಅವಶ್ಯಕವೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಈ ಹಿನ್ನೆಲೆಯಲ್ಲಿ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 107 ಕಾಬಾಸೇ 2014, ಬೆಂಗಳೂರು, ದಿನಾಂಕ: 28–08–2014.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಮಂಗಳೂರು ವಿಭಾಗದ ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರ ಹುದ್ದೆಯನ್ನು ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತ ದೃಷ್ಟಿಯಿಂದ ಮತ್ತು ಬಾಯ್ಲರ್ ತಂತ್ರಜ್ಞಾನ ದೃಷ್ಟಿಯಿಂದ ಕಲಬುರಗಿ ವಿಭಾಗಕ್ಕೆ ಹಾಗೂ ಕಲಬುರಗಿ ವಿಭಾಗದ ಬಾಯ್ಲರುಗಳ ಸಹಾಯಕ ನಿರ್ದೇಶಕರ ಹುದ್ದೆಯನ್ನು ಮಂಗಳೂರು ವಿಭಾಗಕ್ಕೆ ಸ್ಥಳಾಂತರಿಸಲು ಸರ್ಕಾರವು ಸಹಮತಿಸಿದೆ. ಹುದ್ದೆ ಸಹಿತ ಈ ಕೆಳಕಂಡಂತೆ ಆದೇಶಿಸಿದೆ.

ಕ್ರ. ಸಂ.	ಹಾಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿಯ ಪದನಾಮ	ಸ್ಥಳಾಂತರ/ ಪುನರ್‌ಪದನಾಮಗೊಂಡ ನಂತರ ಮರು ಸ್ಥಾಪನೆಯಾಗಿ ಕಾರ್ಯನಿರ್ವಹಿಸಬೇಕಾದ ಕಛೇರಿಯ ಪದನಾಮ
1.	ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ವಿಭಾಗ, ಹುದ್ದೆ ಸಹಿತಿ ಗುಲ್ಬರ್ಗಾಕ್ಕೆ ಸ್ಥಳಾಂತರಿಸಿ ಮುಂದಿನಂತೆ ಮರುಸ್ಥಾಪಿಸಿದೆ.	ಶ್ರೀ ಕೆ.ವಿ ಪಾಲಯ್ಯ, ಹಿರಿಯ ಸಹಾಯಕ ನಿರ್ದೇಶಕರು, ಬಾಯ್ಲರುಗಳು ಇವರನ್ನು ಮಂಗಳೂರಿನಿಂದ ಹುದ್ದೆ ಸಹಿತ ಕಲಬುರಗಿ ವಿಭಾಗಕ್ಕೆ ಶ್ರೀ. ಎಂ.ಎಚ್. ಚಿಕ್ಕಮುನಿಯಪ್ಪ ಬಾಯ್ಲರುಗಳ, ಸಹಾಯಕ ನಿರ್ದೇಶಕರು, ಇವರ ಜಾಗಕ್ಕೆ ಸ್ಥಳಾಂತರಿಸಿ ಮರುಸ್ಥಾಪಿನಿದೆ.
2.	ಬಾಯ್ಲರುಗಳ ಸಹಾಯಕ ನಿರ್ದೇಶಕರು, ಕಲಬುರಗಿ ವಿಭಾಗ ಹುದ್ದೆಸಹಿತ ಮಂಗಳೂರಿಗೆ ಸ್ಥಳಾಂತರಿಸಿ ಮುಂದಿನಂತೆ ಮರುಸ್ಥಾಪಿಸಿದೆ.	ಶ್ರೀ. ಎಂ.ಎಚ್. ಚಿಕ್ಕಮುನಿಯಪ್ಪ ಬಾಯ್ಲರುಗಳ, ಸಹಾಯಕ ನಿರ್ದೇಶಕರು ಇವರನ್ನು ಕಲಬುರಗಿಯಿಂದ ಹುದ್ದೆ ಸಹಿತ ಮಂಗಳೂರಿಗೆ ಶ್ರೀ. ಕೆ.ವಿ. ಪಾಲಯ್ಯ ಇವರ ಜಾಗಕ್ಕೆ ಸ್ಥಳಾಂತರಿಸಿ ಮರುಸ್ಥಾಪಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬೋರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾರ್ಮಿಕ ಇಲಾಖೆ(ಕಾರ್ಖಾನೆ ಮತ್ತು ಬಾಯ್ಲರುಗಳು)

PR.746
SC.50

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಗ್ರಾಅಪ 27 ಎಸ್‌ಜೆವೈ 2014, ದಿನಾಂಕ : 26–08–2014.

ವಿಷಯ : ಸಾಮಾಜಿಕ, ಆರ್ಥಿಕ ಮತ್ತು ಜಾತಿ ಗಣತಿ–2011 (ಎಸ್‌ಇಸಿಸಿ–2011) ಅಂತಿಮ ಗಣತಿ ಪಟ್ಟಿ ಪ್ರಕಟಣೆ ಬಗ್ಗೆ.

ಉಲ್ಲೇಖ : 1. ಸರ್ಕಾರದ ಅಧಿಸೂಚನೆ ಸಂಖ್ಯೆ ಗ್ರಾಅಪ 32 ಎಸ್‌ಜೆವೈ 2011 ದಿನಾಂಕ 07.12.2013., 12.12.2013, 28.12.2013, 07.01.2014 ಮತ್ತು 20.01.2014.

2. ಸರ್ಕಾರದ ಅಧಿಸೂಚನೆ ಸಂಖ್ಯೆ ಗ್ರಾಅಪ 32 ಎಸ್‌ಜೆವೈ 2011(ಎ–8) ದಿನಾಂಕ: 18.02.2014.

ರಾಜ್ಯ ಸರ್ಕಾರವು ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ – 2011 ಸಂಬಂಧ ಉಲ್ಲೇಖ(1)ರಲ್ಲಿ ನಮೂದಿಸಿರುವ ಅಧಿಸೂಚನೆಗಳಂತೆ ಈ ಕೆಳಕಂಡ 5 ಜಿಲ್ಲೆಗಳಲ್ಲಿ ಅಂದರೆ:

1) ಬೆಳಗಾಂ
2) ದಾವಣಗೆರೆ
3) ಧಾರವಾಡ
4) ಗದಗ್
5) ಹಾವೇರಿ

ಈ ಜಿಲ್ಲೆಗಳಲ್ಲಿ ಕರಡು ಮತ್ತು ಅಂತಿಮ ಪಟ್ಟಿ ಪ್ರಕಟಿಸಲು ವೇಳಾಪಟ್ಟಿ ನೀಡಲಾಗಿತ್ತು. ಆದರೆ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ – 2011ರ ಪ್ರಕ್ರಿಯೆಯು ಮೇಲ್ಕಂಡ ಜಿಲ್ಲೆಗಳ ಎಸ್‌ಇಸಿಸಿ–2011ರ ಪ್ರಕ್ರಿಯೆ ಪೂರ್ಣಗೊಂಡಿಲ್ಲದ ಕಾರಣ ಅಂತಿಮ ಪಟ್ಟಿ ಪ್ರಕಟಣೆಯ ದಿನಾಂಕವನ್ನು ಉಲ್ಲೇಖ (2)ರಂತೆ ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲಾಗಿತ್ತು.

ಪ್ರಸ್ತುತ ಈ ಪ್ರಕ್ರಿಯೆಯು ಮೇಲ್ಕಂಡ ಜಿಲ್ಲೆಗಳಲ್ಲಿ ಪೂರ್ಣಗೊಂಡಿರುವುದರಿಂದ ದಿನಾಂಕ: 30.08.2014ರಂದು ಅಂತಿಮ ಗಣತಿ ಪಟ್ಟಿ ಪ್ರಕಟಿಸಲು ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಶ್ರೀಕೃಷ್ಣ ಎನ್. ಬುಗಟ್ಯಾಗೋಳ
ನಿರ್ದೇಶಕರು(ಇ-ಆಡಳಿತ)ಮತ್ತು ಸ್ವಉಕಾ ಹಾಗೂ ಪದ ನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ರಾಜ್ಯದ ಎಸ್ಇಸಿಸಿ-2011 ನೋಡಲ್ ಅಧಿಕಾರಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

RURAL DEVELOPMENT & PANCHAYAT SECRETARIAT

NOTIFICATION

No. RDP 27 SJY 2014, Dated: 26.08.2014.

Sub: Socio, Economic & Caste Census 2011 (SECC-2011) Publication of Final List-Reg.

Ref:
1. Notifications No. RDP 32 SJY 2011, dated: 07.12.2011, 12.12.2013, 28.12.2013, 07.01.2014, and 20.01.2014.
2. Notification No. RDP 32 SJY 2011 dated: 19.02.2014.

Government of Karnataka, Rural Development and Panchayat Raj Department had issued notifications indicating the time length for publishing draft and final lists of Socio, Economic & Caste Census 2011 in the following districts as per Ref (1).

1. Belgaum.
2. Davanagere.
3. Dharwad.
4. Gadag.
5. Haveri.

As per Ref (2), this process of publication of final list was postponed because the process was not completed.

Presently, SECC 2011 process has been completed in the above 5 districts. Hence, sanction is accorded to publish the final list in the above 5 districts on 30.08.2014.

By Order and in the name of the Government of Karnataka
Shreekrishna N. Bugatyagol
Director (e-governance) & SEP & E/O Dy. Secretary to
Government I/c and State Nodal Officer SECC-2011 Rural
Development & Panchayat Raj Dept.

PR-703
SC-10

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಂ.ಎಸ್. ಅಶ್ವತೀಶ್, ಎಪಿಸಿ-116, ಡಿಎಆರ್, ಬೆಂಗಳೂರು ಇವರ ಪರಿಷ್ಕರಣ ಮೇಲ್ಮನವಿಯ ಬಗ್ಗೆ ಅಂತಿಮ ಆದೇಶ.

ಓದಲಾಗಿದೆ :
1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಬೆಂಗಳೂರು ಇವರ ಆದೇಶ ಸಂಖ್ಯೆ: 16/ಡಿಇ/ಆರ್-6/2010 (ಓ.ಬಿ.ಸಂಖ್ಯೆ: 62/2011) ದಿನಾಂಕ: 03.02.2012
2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರವಲಯ, ಬೆಂಗಳೂರು ಇವರ ಆದೇಶ ಸಂಖ್ಯೆ: ಅಪೀಲು/58/ಶಿಕ್ಷೆ/2012, (ಓ.ಬಿ.ಸಂಖ್ಯೆ: 97/2012-13) ದಿನಾಂಕ: 12.10.2012
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 07.06.2013
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)16/2013-14 ದಿನಾಂಕ: 03.05.2014

ಪ್ರಸ್ತಾವನೆ :

ಶ್ರೀ ಎಂ.ಎಸ್. ಅಶ್ವತೀಶ್, ಎಪಿಸಿ-116 (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಡಿಎಆರ್, ಬೆಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ದುರ್ನಡತೆ ತೋರಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

“ಆಪಾದಿತ ಪೊಲೀಸ್ ಅಧಿಕಾರಿಯಾದ ಶ್ರೀ ಎಂ.ಎಸ್. ಅಶ್ವತೀಶ, ಎ.ಪಿ.ಸಿ.–116, ಡಿ.ಎ.ಆರ್. ಬೆಂಗಳೂರು ಜಿಲ್ಲೆ ಆದ ನೀವು ಬೆಂಗಳೂರು ನಗರ, ಬಸವೇಶ್ವರ ನಗರ ಪೊಲೀಸ್ ಠಾಣಾ ಮೊ.ಸಂ.474/09 ಕಲಂ: 498(ಎ) ಐ.ಪಿ.ಸಿ. ಪ್ರಕರಣದಲ್ಲಿ ಆರೋಪಿತನಾಗಿದ್ದು, ಈ ಸಂಬಂಧ ನಿಮ್ಮನ್ನು ದಿ: 14.10.2009ರಂದು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದು, ನೀವು ಒಬ್ಬ ಸರ್ಕಾರಿ ನೌಕರನಾಗಿದ್ದು, ಕ್ರಿಮಿನಲ್ ಪ್ರಕರಣ ಒಂದರಲ್ಲಿ ಭಾಗಿಯಾಗಿ ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ನೀವು ನಿಮ್ಮ ಕರ್ತವ್ಯದಲ್ಲಿ ದುರ್ನಡತೆಯನ್ನು ತೋರಿರುತ್ತೀರಿ”

ಇಲಾಖಾ ವಿಚಾರಣೆಯಲ್ಲಿ ಆಪೊಅ.ರವರ ಮೇಲಿನ ಆಪಾದನೆಗಳು ಸಾಬೀತಾಗಿದೆಯೆಂದು ವಿಚಾರಣಾಧಿಕಾರಿಗಳು ಅಭಿಪ್ರಾಯ ನೀಡಿದ್ದು, ಅದರಂತೆ ಆ.ಪೊ.ಅ.ರವರಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ, ಆ.ಪೊ.ಅ.ರವರು ನೀಡಿದ ಸಮಜಾಯಿಷಿಯನ್ನು ಒಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಬೆಂಗಳೂರು ಜಿಲ್ಲೆ ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 03.02.2012ರ ಆದೇಶದಲ್ಲಿ ಅರ್ಜಿದಾರರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಅನ್ವಯವಾಗುವಂತೆ ಒಂದು ವರ್ಷದ ಕಾಲ ಮುಂದೂಡಿ, ಸದರಿಯವರ ಅಮಾನತ್ತಿನ ಅವಧಿ ದಿನಾಂಕ 14.10.2009ರಿಂದ ದಿನಾಂಕ: 07.02.2011ರವರೆಗೆ ಒಟ್ಟು 492 ದಿನಗಳನ್ನು ಅಮಾನತ್ತೆಂದು ಪರಿಗಣಿಸಲಾದ ದಂಡನೆಯನ್ನ ವಿಧಿಸಿರುತ್ತಾರೆ.

ಶಿಸ್ತು ಪ್ರಾಧಿಕಾರದ ಆದೇಶದ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 12.10.2012ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣಾ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಕ್ರಿಮಿನಲ್ ಪ್ರಕರಣಕ್ಕೂ ಇಲಾಖಾ ವಿಚಾರಣೆಗೂ ಯಾವುದೇ ಸಂಬಂಧ ಇರುವುದಿಲ್ಲ. ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗಿ ಆ.ಪೊ.ಅ.ರವರಿಗೆ ದಂಡನೆ ವಿಧಿಸಲಾಗಿದೆ. ಕ್ರಿಮಿನಲ್ ಪ್ರಕರಣದಲ್ಲಿ ಆ.ಪೊ.ಅ ನಿರ್ದೋಷಿ ಎಂದು ಪರಿಗಣಿಸದಿದ್ದರೂ ಸಹಾ ಅದನ್ನು ಮಾನದಂಡವಾಗಿಟ್ಟುಕೊಂಡು ಅವರನ್ನು ಇಲಾಖಾ ವಿಚಾರಣೆಯಲ್ಲಿ ನಿರ್ದೋಷಿ ಎಂದು ಪರಿಗಣಿಸಲು ಕೋರಿರುವುದು ಸೂಕ್ತವಾಗುವುದಿಲ್ಲ. ಮತ್ತು ಇವರ ಮೇಲಿನ ದೋಷಾರೋಪಣೆಗೆ ಅನುಗುಣವಾಗಿ ದಂಡನೆಯನ್ನು ನೀಡಿದ್ದು, ಸಾಮಾನ್ಯ ನ್ಯಾಯದ ದೃಷ್ಟಿಯಿಂದಲೂ ಸಹ ಇಲ್ಲಿ ಯಾವುದೇ ಚ್ಯುತಿಯಾಗದ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 72 ಪೊಸಿಅ 2013, ಬೆಂಗಳೂರು, ದಿನಾಂಕ : 25–08–2014.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಎಸ್. ಅಶ್ವತೀಶ್, ಎಪಿಸಿ–116, ಡಿಎಆರ್, ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ದೇವೇಂದ್ರಪ್ಪ ಕಟ್ಟಿಮನಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–ಬಿ)

PR-704

ಒಳಾಡಳಿತ ಸಚಿವಾಲಯ

ವಿಷಯ : ಗಂಗೊಳ್ಳಿ ಪೊಲೀಸ್ ಠಾಣೆಯನ್ನು ಬೈಂದೂರು ವೃತ್ತಕ್ಕೆ ಸೇರ್ಪಡೆಗೊಳಿಸುವ ಕುರಿತು.

ಓದಲಾಗಿದೆ : ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕ ರವರು ಪತ್ರ ಸಂಖ್ಯೆ:ಆರ್.ಎಲ್.ಎನ್(6)31/2013–14, ದಿನಾಂಕ: 16.12.2013 ಮತ್ತು 06.06.2014.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರಗಳಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಉಡುಪಿ ಜಿಲ್ಲೆಯ ಕುಂದಾಪುರ ಉಪ–ವಿಭಾಗವು, ಕುಂದಾಪುರ ಮತ್ತು ಬೈಂದೂರು ವೃತ್ತಗಳನ್ನು ಹೊಂದಿರುತ್ತದೆ. ಅದರಲ್ಲಿ ಕುಂದಾಪುರ ವೃತ್ತಕ್ಕೆ 06 ಪೊಲೀಸ್ ಠಾಣೆಗಳು, ಬೈಂದೂರು ವೃತ್ತವು 02 ಪೊಲೀಸ್ ಠಾಣೆಗಳನ್ನು ಒಳಗೊಂಡಿರುತ್ತವೆ. ಕುಂದಾಪುರ ವೃತ್ತದ ಗಂಗೊಳ್ಳಿ ಪೊಲೀಸ್ ಠಾಣೆಯು ಸೂಕ್ಷ್ಮ ಪ್ರದೇಶವಾಗಿರುತ್ತದೆ. ಅಲ್ಲದೇ ಈ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಿರು ಬಂದರು ಕೂಡಾ ಇದ್ದು, ಸದ್ರಿ ಬಂದರಿನಲ್ಲಿ ಮೀನುಗಾರಿಕೆ ನಡೆಯುತ್ತಿದ್ದು, ಇಲ್ಲಿಗೆ ಬೇರೆ ರಾಜ್ಯಗಳ ಮೀನುಗಾರರು ಬರುವುದರಿಂದ ಸ್ಥಳೀಯ ಮತ್ತು ಬೇರೆ ರಾಜ್ಯಗಳ ಮೀನುಗಾರರ ಮಧ್ಯೆ ಮೀನುಗಾರಿಕೆಗೆ ಸಂಬಂಧಪಟ್ಟಂತೆ ಆಗಾಗ ಘರ್ಷಣೆಗಳುಂಟಾಗಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗುತ್ತಿರುತ್ತದೆ. ಈ ಪೊಲೀಸ್ ಠಾಣೆಯು ಬೈಂದೂರು ವೃತ್ತಕ್ಕೆ ಹತ್ತಿರವಾಗುವುದಲ್ಲದೆ ಆಡಳಿತಾತ್ಮಕ ದೃಷ್ಟಿಯಿಂದಲೂ ಅನುಕೂಲಕರವಾಗಿರುವುದರಿಂದ ಕುಂದಾಪುರ ವೃತ್ತದ ಅಧೀನದಲ್ಲಿರುವ ಗಂಗೊಳ್ಳಿ ಪೊಲೀಸ್ ಠಾಣೆಯನ್ನು ಕುಂದಾಪುರ ವೃತ್ತದಿಂದ ಬೇರ್ಪಡಿಸಿ, ಬೈಂದೂರು ವೃತ್ತಕ್ಕೆ ಸೇರ್ಪಡೆಗೊಳಿಸಿ ಆದೇಶವನ್ನು ಹೊರಡಿಸುವಂತೆ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕ ರವರು ಸರ್ಕಾರವನ್ನು ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 46 ಪಿಪಿಪಿ 2014 ಬೆಂಗಳೂರು, ದಿನಾಂಕ:11.07.2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕುಂದಾಪುರ ವೃತ್ತದ ಅಧೀನದಲ್ಲಿರುವ ಗಂಗೊಳ್ಳಿ ಪೊಲೀಸ್ ಠಾಣೆಯನ್ನು ಬೈಂದೂರು ವೃತ್ತಕ್ಕೆ ಸೇರ್ಪಡೆಗೊಳಿಸಿ ಸರ್ಕಾರವು ಆದೇಶಿಸಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಒಸಾಇ 32588 ಆಂಆಸ 2014, ದಿನಾಂಕ:23.06.2014ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಆರ್. ಪುಟ್ಟೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

PR-705
SC-50

ಒಳಾಡಳಿತ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಹೆಚ್‌ಡಿ 10 ಪಿಸಿಇ 2014 ಬೆಂಗಳೂರು, ದಿನಾಂಕ: 30.08.2014.

ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ 10 ಪಿಸಿಇ 2014, ದಿನಾಂಕ: 20.08.2014ರಲ್ಲಿನ ಆದೇಶ ಭಾಗದ ಎರಡನೇ ಕಂಡಿಕೆಯ ಮೊದಲನೇ ಸಾಲಿನಲ್ಲಿ "ಲೆಕ್ಕ ಶೀರ್ಷಿಕೆ 2235–60–200–3–01–100 ಯೋಜನೇತರ " ಅಡಿಯಲ್ಲಿ ಭರಿಸತಕ್ಕದ್ದು. ಜಿಲ್ಲಾಧಿಕಾರಿ, ಬಿಜಾಪುರ ಎಂದು ಇರುವುದನ್ನು " **ಲೆಕ್ಕ ಶೀರ್ಷಿಕೆ 2055–00–109–1–01–051 ಯೋಜನೇತರ ಪೊಲೀಸ್ ಅಧೀಕ್ಷಕರು, ಬಿಜಾಪುರ ಜಿಲ್ಲೆ ಎಂದು ಓದಿಕೊಳ್ಳತಕ್ಕದ್ದು,** ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೋವಿಂದಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ)

PR-706
SC-50

ಒಳಾಡಳಿತ ಸಚಿವಾಲಯ

ವಿಷಯ : ಡಾ.ಬಿ.ಎಂ.ಮೋಹನ್, ನಿರ್ದೇಶಕರು (ನಿವೃತ್ತ), ಎಫ್‌ಎಸ್‌ಎಲ್, ಬೆಂಗಳೂರು ಮತ್ತು ಶ್ರೀ ಪ್ರವೀಣ್ ಪಿ.ಬಾರಿಗಿಡದ್, ವೈಜ್ಞಾನಿಕ ಸಹಾಯಕರು (ಹಾಲಿ ಅಮಾನತ್ತು)ರವರುಗಳ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಒಇ 42 ಪೊಸಿಲಿ 2012, ದಿನಾಂಕ: 04.07.2013.
2. ಶ್ರೀ ಎನ್.ನಾರಾಯಣ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ (ವಿಶ್ರಾಂತ) ವಿಚಾರಣಾಧಿಕಾರಿರವರ ಪತ್ರ ದಿನಾಂಕ: 18.12.2013.
3. ಸರ್ಕಾರದ ಪತ್ರ ಸಂಖ್ಯೆ:ಒಇ 42 ಪೊಸಿಲಿ 2012, ದಿನಾಂಕ: 27.12.2013 ಮತ್ತು 21.04.2014 ಹಾಗೂ ಅರೆ ಸರ್ಕಾರಿ ಪತ್ರ ದಿನಾಂಕ: 04.06.2014.
4. ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ: ಸಿಬಿ(5) 11/2012–13 ದಿನಾಂಕ: 07.06.2014.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ 2003ರಲ್ಲಿ ನಡೆದ ವೈಜ್ಞಾನಿಕ ಸಹಾಯಕ ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿರುವ ಅಕ್ರಮ ಅವ್ಯವಹಾರ ಕುರಿತಂತೆ ಸಿ.ಐ.ಡಿ. ತನಿಖಾ ವರದಿ ಅನ್ವಯ ಡಾ.ಬಿ.ಎಂ.ಮೋಹನ್, ನಿರ್ದೇಶಕರು (ನಿವೃತ್ತ) ಮತ್ತು ಶ್ರೀ ಪ್ರವೀಣ್ ಪಿ.ಬಾರಿಗಿಡದ್, ವೈಜ್ಞಾನಿಕ ಸಹಾಯಕರು (ಹಾಲಿ ಅಮಾನತ್ತು)ರವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಆದೇಶಿಸಿದ ಪ್ರಕರಣದಲ್ಲಿ ಶ್ರೀ ಎನ್.ನಾರಾಯಣ್, ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ಮತ್ತು ಶ್ರೀ ಎನ್.ನಾಗರಾಜ್, ಅಡಿಷನಲ್ ಎಸ್.ಪಿ ಬೆಂಗಳೂರು ಜಿಲ್ಲೆರವರನ್ನು ಮಂಡನಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ ಶ್ರೀ ಎನ್.ನಾಗರಾಜು, ಆಗಿನ ಅಪರ ಪೊಲೀಸ್ ಅಧೀಕ್ಷಕರು, ಬೆಂಗಳೂರು ಜಿಲ್ಲೆ, ಹಾಲಿ ಪೊಲೀಸ್ ಅಧೀಕ್ಷಕರು, ಗುಪ್ತವಾರ್ತೆ, ಬೆಂಗಳೂರು ಇವರು ಸೇವೆಯಿಂದ ವಯೋನಿವೃತ್ತಿ ಹೊಂದಲಿದ್ದು, ಮಂಡನಾಧಿಕಾರಿ ಕರ್ತವ್ಯದಿಂದ ವಿಮುಕ್ತಿಗೊಳಿಸಲು ಕೋರಿರುತ್ತಾರೆಂದು ತಿಳಿಸಿ, ಬೇರೆ ಮಂಡನಾಧಿಕಾರಿಯನ್ನು ನೇಮಿಸಲು ಕೋರಿರುತ್ತಾರೆ. ಅದರನ್ವಯ ಮೇಲೆ ಓದಲಾದ (3)ರ ಪತ್ರಗಳಲ್ಲಿ ಬೇರೆ ಮಂಡನಾಧಿಕಾರಿಯನ್ನು ನೇಮಿಸಲು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಡಿಜಿ ಮತ್ತು ಐಜಿಪಿರವರನ್ನು ಕೋರಲಾಗಿತ್ತು.

ಮೇಲೆ ಓದಲಾದ (4)ರ ಪತ್ರದಲ್ಲಿ ಪ್ರಕರಣದ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ಶ್ರೀ ಎನ್.ನಾಗರಾಜು, ಪೊಲೀಸ್ ಅಧೀಕ್ಷಕರು, ರಾಜ್ಯಗುಪ್ತವಾರ್ತೆ, ಬೆಂಗಳೂರುರವರು ಸೇವೆಯಿಂದ ವಯೋನಿವೃತ್ತಿಯನ್ನು ಹೊಂದಿರುವುದರಿಂದ, ಇವರ ಬದಲಿಗೆ ಪೊಲೀಸ್ ಅಧೀಕ್ಷಕರು, ಎಟಿಸಿ, ರಾಜ್ಯ ಗುಪ್ತವಾರ್ತೆ, ಬೆಂಗಳೂರುರವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡುವಂತೆ ಡಿಜಿ ಮತ್ತು ಐಜಿಪಿ ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 42 ಪೊಸಿಲಿ 2012 ಬೆಂಗಳೂರು, ದಿನಾಂಕ: 08.08.2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಡಾ.ಬಿ.ಎಂ.ಮೋಹನ್, ನಿರ್ದೇಶಕರು (ನಿವೃತ್ತ) ಮತ್ತು ಶ್ರೀ ಪ್ರವೀಣ್ ಪಿ.ಬಾರಿಗಿಡದ್, ವೈಜ್ಞಾನಿಕ ಸಹಾಯಕರು (ಹಾಲಿ ಅಮಾನತ್ತು)ರವರುಗಳ ವಿರುದ್ಧ ಸರ್ಕಾರಿ ಆದೇಶ ಸಂಖ್ಯೆ: ಒಇ 42 ಪೊಸಿಲಿ 2012, ದಿನಾಂಕ: 04.07.2013ರಲ್ಲಿ ಆದೇಶಿಸಿದ ಇಲಾಖಾ ವಿಚಾರಣೆಯಲ್ಲಿ ಶ್ರೀ ಎನ್.ನಾಗರಾಜು, ಪೊಲೀಸ್ ಅಧೀಕ್ಷಕರು, ರಾಜ್ಯಗುಪ್ತವಾರ್ತೆ, ಬೆಂಗಳೂರುರವರು ಸೇವೆಯಿಂದ ವಯೋನಿವೃತ್ತಿಯನ್ನು ಹೊಂದಿರುವುದರಿಂದ, ಇವರ ಬದಲಿಗೆ ಪೊಲೀಸ್ ಅಧೀಕ್ಷಕರು, ಎಟಿಸಿ, ರಾಜ್ಯ ಗುಪ್ತವಾರ್ತೆ, ಬೆಂಗಳೂರುರವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ದೇವೇಂದ್ರಪ್ಪ ಕಟ್ಟಿಮನಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–ಎ)

PR-707

ಒಳಾಡಳಿತ ಸಚಿವಾಲಯ

ವಿಷಯ : ಸಿಟಿ ಸಿವಿಲ್ ನ್ಯಾಯಾಲಯ ಬೆಂಗಳೂರು ಇಲ್ಲಿ ವಕೀಲರು, ಮಾಧ್ಯಮ ಪ್ರತಿನಿಧಿಗಳು ಮತ್ತು ಪೊಲೀಸ್ ನಡುವೆ ನಡೆದ ಘರ್ಷಣೆ ಕುರಿತು ನ್ಯಾಮೂ. ಶ್ರೀ.ಆರ್.ಜಿ. ವೈದ್ಯನಾಥ ವಿಚಾರಣಾ ಆಯೋಗದ ಮುಂದೆ ಸರ್ಕಾರದ ಪರವಾಗಿ ವಾದ ಮಂಡಿಸಿದ ಶ್ರೀ.ಜಿ.ಕೆ ಬೇಕಲ್, ವಕೀಲರು, (ನಿವೃತ್ತ ಉಪ ಪೊಲೀಸ್ ಆಯುಕ್ತರು) ಬೆಂಗಳೂರು ಇವರಿಗೆ ಸಂಭಾವನೆ ಮಂಜೂರು ಮಾಡುವ ಕುರಿತು.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 4 ಪಿಸಿಇ 2012 ದಿನಾಂಕ: 09.03.2012.
2. ದಿನಾಂಕ: 13.08.2012ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 11 ಪಿಸಿಇ 2012.
3. ಶ್ರೀ.ಜಿ.ಕೆ. ಬೇಕಲ್, ವಕೀಲರು, ನಿವೃತ್ತ ಉಪ ಪೊಲೀಸ್ ಆಯುಕ್ತರು, ಬೆಂಗಳೂರು ಇವರ ಮನವಿ ದಿನಾಂಕ: 30.05.2014 ಮತ್ತು 07.07.2014.

ಪ್ರಸ್ತಾವನೆ :

ದಿನಾಂಕ: 02.03.2012ರಂದು ಬೆಂಗಳೂರು ನಗರದ ಸಿವಿಲ್ ನ್ಯಾಯಾಲಯದ ಆವರಣದಲ್ಲಿ ವಕೀಲರು, ಮಾಧ್ಯಮ ಪ್ರತಿನಿಧಿಗಳು ಮತ್ತು ಪೊಲೀಸ್ ನಡುವೆ ನಡೆದ ಘಟನೆಯ ಕುರಿತು ಕೂಲಂಕಷವಾಗಿ ತನಿಖೆ ನಡೆಸಲು ನ್ಯಾಯಮೂರ್ತಿ ಶ್ರೀ.ಆರ್.ಜಿ. ವೈದ್ಯನಾಥ ಆಯೋಗವನ್ನು ಮೇಲೆ ಓದಲಾದ (1)ರ ಆದೇಶದಲ್ಲಿ ನೇಮಿಸಲಾಗಿದೆ.

ಶ್ರೀ.ಜಿ.ಕೆ. ಬೇಕಲ್, ವಕೀಲರು, (ನಿವೃತ್ತ ಉಪ ಪೊಲೀಸ್ ಆಯುಕ್ತರು) ಬೆಂಗಳೂರು ಅವರನ್ನು ನ್ಯಾಯಮೂರ್ತಿ ಶ್ರೀ.ಆರ್.ಜಿ. ವೈದ್ಯನಾಥ ವಿಚಾರಣಾ ಆಯೋಗದ ಮುಂದೆ ಸರ್ಕಾರದ ಪರವಾಗಿ ವಾದಿಸಲು ಮೇಲೆ ಓದಲಾದ(2)ರ ಆದೇಶದಲ್ಲಿ ನೇಮಕ ಮಾಡಲಾಗಿದೆ.

ಶ್ರೀ.ಜಿ.ಕೆ. ಬೇಕಲ್, ವಕೀಲರು, ಬೆಂಗಳೂರು ಇವರು ಸರ್ಕಾರದ ಪರವಾಗಿ ಮೇ ತಿಂಗಳ ದಿನಾಂಕ: 05.05.2014, 06.05.2014, 13.05.2014, 14.05.2014, 20.05.2014, 26.05.2014, 27.05.2014, 28.05.2014, ಮತ್ತು 30.05.2014 ಒಟ್ಟು 9 ಮಹತ್ವದ ದಿನಗಳು ದಿನವೊಂದಕ್ಕೆ 10,000ರಂತೆ 9 ದಿನಗಳಿಗೆ ರೂ.90,000/– ದಿನಾಂಕ: 09.05.2014 ಮತ್ತು 19.05.2014 ಮಹತ್ವವಲ್ಲದ ದಿನಗಳ ದಿನವೊಂದಕ್ಕೆ ರೂ.6,000/– ರಂತೆ 2 ದಿನಗಳಿಗೆ ರೂ.12,000/– ಸಂಭಾವನೆಯಾಗಿ ಒಟ್ಟು ರೂ.1,02,000/– ಮತ್ತು ಜೂನ್ ತಿಂಗಳಲ್ಲಿ ದಿನಾಂಕ: 12.06.2014 ಮತ್ತು 21.06.2014 ಮಹತ್ವದ ದಿನಗಳು ಹಾಗೂ ಮಹತ್ವವಲ್ಲದ 07.06.2014 ಒಟ್ಟು ರೂ.26,000/–+ರೂ. 1,02,000/– = ರೂ.1,28,000/–(ಒಂದು ಲಕ್ಷದ ಇಪ್ಪತ್ತೆಂಟು ಸಾವಿರ ರೂಪಾಯಿ ಮಾತ್ರ) ಮೊತ್ತವನ್ನು ಮಂಜೂರು ಮಾಡುವಂತೆ ಮೇಲೆ ಓದಲಾದ(3)ರ ಪತ್ರಗಳಲ್ಲಿ ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 11 ಪಿಸಿಇ 2012, ಬೆಂಗಳೂರು ದಿನಾಂಕ: 16.08.2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ.ಜಿ.ಕೆ. ಬೇಕಲ್, ವಕೀಲರು(ನಿವೃತ್ತ ಉಪ ಪೊಲೀಸ್ ಆಯುಕ್ತರು), ಬೆಂಗಳೂರು ಇವರಿಗೆ ಈ ಕೆಳಕಂಡಂತೆ ಸಂಭಾವನೆಯನ್ನು ಮಂಜೂರು ಮಾಡಲಾಗಿದೆ.

ಕ್ರ. ಸಂ.	ಸಂಭಾವನೆಯ ವಿವರ	ಮೊತ್ತ
1.	Effective hearing (9 days) dated, 05.05.2014, 06.05.2014, 13.05.2014, 14.05.2014, 20.05.2014, 26.05.2014, 27.05.2014, 28.05.2014, ಮತ್ತು 30.05.2014 @ 10,000/– per day Non-effective hearning one day 09.05.2014 & 19.05.2014 @ 6,000/- per day	90,000–00 12,000–00
2.	Effective(2days), 12.06.2014, 21.06.2014 Non-effective (1 day) 07.06.2014	20,000–00 6,000–00
	ಒಟ್ಟು ಮೊತ್ತ. (ರೂಪಾಯಿ ಒಂದು ಲಕ್ಷದ ಇಪ್ಪತ್ತೆಂಟು ಸಾವಿರಗಳು ಮಾತ್ರ	**1,28,000–00**

3. ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ **"2070–00–105–0–02–059 ವಿಶೇಷ ತನಿಖಾ ಆಯೋಗಗಳು"** ಅಡಿಯಲ್ಲಿ ಭರಿಸತಕ್ಕದ್ದು. ಸದರಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಿಡುಗಡೆಯಾದ ಹಣವನ್ನು ಹಿಂಪಡೆದು ವಿತರಿಸಲು ಸರ್ಕಾರದ ಅಧೀನ ಕಾರ್ಯದರ್ಶಿ(ಕಾನೂನು ಮತ್ತು ಸುವ್ಯವಸ್ಥೆ), ಒಳಾಡಳಿತ ಇಲಾಖೆ ಇವರನ್ನು ಹಣ ಹಿಂಪಡೆಯುವ ಮತ್ತು ವಿತರಿಸುವ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.
4. ಈ ಆದೇಶವನ್ನು ಆರ್ಥಿಕ ಇಲಾಖೆ ಆದೇಶ ಸಂಖ್ಯೆ: ಆಇ 3 ಟಿಎಫ್‌ಪಿ 2011, ದಿನಾಂಕ: 27.01.2012ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಿದ ರೀತ್ಯಾ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋವಿಂದಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ)

PR-708

SC-50

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಂ.ಎಸ್. ಶಿವಣ್ಣನವರ, ಸಿಪಿಸಿ–945, ಬ್ಯಾಡಗಿ ಪೊಲೀಸ್ ಠಾಣೆ, ಹಾಲಿ ರಾಜ್ಯ ಗುಪ್ತ ವಾರ್ತೆ, ಹಾವೇರಿ ಜಿಲ್ಲೆ ಇವರ ಪರಿಷ್ಕರಣ ಮೇಲ್ಮನವಿಯ ಬಗ್ಗೆ ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ ಇವರ ಆದೇಶ ಸಂಖ್ಯೆ: ಡಿಇ/63/ಉವ/2008 ದಿನಾಂಕ: 24.05.2008
2. ಮೇಲ್ಮನವಿ ಪ್ರಾಧಿಕಾರ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಆದೇಶ ಸಂಖ್ಯೆ ಅಪೀಲು(6)/2008–09 (ಒ.ಬಿ. ಸಂಖ್ಯೆ: 32/2008–09) ದಿನಾಂಕ: 10.12.2008
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 02.09.2010
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)58/ 2010–11 ದಿನಾಂಕ: 16.12.2013
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 221 ಸಿಎನ್‌ಎಸ್ 2013 ದಿನಾಂಕ: 04.08.2014

ಪ್ರಸ್ತಾವನೆ :

ಶ್ರೀ ಎಂ.ಎಸ್. ಶಿವಣ್ಣನವರ, ಸಿಪಿಸಿ–945, ಹಾಲಿ ರಾಜ್ಯ ಗುಪ್ತವಾರ್ತೆ, ಹಾವೇರಿ ಜಿಲ್ಲೆ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಈ ಹಿಂದೆ ಬ್ಯಾಡಗಿ ಪೊಲೀಸ್ ಠಾಣೆ, ಹಾವೇರಿ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ಘೋರ ನಿರ್ಲಕ್ಷ್ಯತನ ತೋರಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ಮತ್ತು 8ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

"ನೀವು ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಅಂತ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ: 01.07.2007 ರಂದು ರಾತ್ರಿ ಬ್ಯಾಡಗಿ ಪಟ್ಟಣದ ಒಂದನೇ ಬೀಟ್ ಗಸ್ತು ಕರ್ತವ್ಯಕ್ಕೆ ಬ್ಯಾಡಗಿ ಠಾಣೆಯ ಪಿ.ಎಸ್.ಐ.ರವರು ರಾತ್ರಿ 21.00 ಗಂಟೆಗೆ ಸಿ.ಹೆಚ್.ಸಿ.–692ರವರೊಂದಿಗೆ ನೇಮಿಸಿದ್ದು, ಅದರಂತೆ ಅದೇ ದಿವಸ ರಾತ್ರಿ 22.30 ಗಂಟೆಗೆ ಎಸ್.ಹೆಚ್.ಓ. ಕರ್ತವ್ಯದಲ್ಲಿದ್ದ ಸಿ.ಹೆಚ್.ಸಿ.–700, ಬಿ.ಎಫ್. ಚಲುವಾದಿ ನಿಮಗೆ ಗಸ್ತು ಕರ್ತವ್ಯಕ್ಕೆ ಹೋಗಲು ಆದೇಶಿಸಿ ಠಾಣೆಯಿಂದ ಕಳಿಸಿಕೊಂಡಿರುತ್ತಾರೆ.

ದಿನಾಂಕ: 01.07.2007 ರಂದು ರಾತ್ರಿ 23.15 ಗಂಟೆಗೆ ಮಾನ್ಯ ಎಸ್.ಪಿ ಸಾಹೇಬರು ಹಾವೇರಿಯವರು ಬ್ಯಾಡಗಿ ಪೊಲೀಸ್ ಠಾಣೆಗೆ ಅನಿರೀಕ್ಷಿತವಾಗಿ ಭೇಟಿ ನೀಡಿದ ಸಮಯದಲ್ಲಿ ನೀವು ನಿಮ್ಮ ಕರ್ತವ್ಯದ ಮೇಲೆ ಹೋಗದೆ ಅಂದರೆ 1ನೇ ಬೀಟ್ ಕರ್ತವ್ಯಕ್ಕೆ ಹೋಗದೆ ಠಾಣೆಯಲ್ಲಿದ್ದುಕೊಂಡು ನಿಮ್ಮ ಕರ್ತವ್ಯದಲ್ಲಿ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನ ತೋರಿರುತ್ತೀರಿ. ರಾತ್ರಿ ಗಸ್ತು ಕರ್ತವ್ಯ ಅತಿ ಮುಖ್ಯವಾಗಿದ್ದು, ಜವಾಬ್ದಾರಿಯುತವಾಗಿದ್ದರೂ ಸಹ ನಿಮಗೆ ನೇಮಿಸಿದ ಕರ್ತವ್ಯಕ್ಕೆ ಹೋಗದೆ ಠಾಣೆಯಲ್ಲಿ ಉಳಿದುಕೊಂಡು ಕಾಲಾಹರಣೆ ಮಾಡಿ ಕರ್ತವ್ಯದಲ್ಲಿ ಘೋರ ನಿರ್ಲಕ್ಷತನ ತೋರಿರುತ್ತೀರಿ"

ಮೇಲಿನ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು, ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 24.05.2008ರ ಆದೇಶದಲ್ಲಿ ಇವರ ವಾರ್ಷಿಕ ವೇತನ ಬಡ್ತಿಯನ್ನು ಮುಂಬರುವ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ 2 ವರ್ಷಗಳ ಕಾಲ ಮುಂದೂಡಿ, ಇವರ ದಿನಾಂಕ: 03.07.2007ರಿಂದ 21.07.2007ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಲಾದ ದಂಡನೆಯನ್ನು ವಿಧಿಸಿರುತ್ತಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ್ದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 10.12.2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡು ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಅರ್ಜಿದಾರರು ದಿನಾಂಕ: 07.01.2007ರಂದು ಗಸ್ತು ಕರ್ತವ್ಯಕ್ಕೆ ಹೋಗದೆ ಇರುವುದನ್ನು ಒಪ್ಪಿಕೊಂಡಿದ್ದು ಅವರ ತಪ್ಪನ್ನು ಒಪ್ಪಿಕೊಂಡಿದ್ದು, ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದ್ದು, ಯುವ ಶಕ್ತಿಗೆ ಬದಲಾವಣೆಯಾಗಲು (Reformative Method) ಅವಕಾಶ ಕೊಟ್ಟರೆ, ಅವರ ಮನೋಬಲ ವೃದ್ಧಿಯಾಗಿ ಉತ್ತಮ ಮತ್ತು ಪ್ರಾಮಾಣಿಕ ಕೆಲಸವನ್ನು ನಿರೀಕ್ಷಿಸಬಹುದು. ಹಾಗೂ ಆ.ಪೊ.ಅ.ರವರಿಗೆ ನೀಡಿರುವ ಶಿಕ್ಷೆ ಅವರು ಮಾಡಿರುವ ಅಪರಾಧಕ್ಕೆ ಅನುಗುಣವಾಗಿರುವುದಿಲ್ಲ ಮತ್ತು ಶಿಕ್ಷೆಯು ಹೆಚ್ಚಿನದೆಂದು ಕಂಡು ಬರುವ ಹಿನ್ನೆಲೆಯಲ್ಲಿ ಇವರ ಪರಿಷ್ಕರಣ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿ ಪರಿಷ್ಕೃತ ದಂಡನೆಯನ್ನು ವಿಧಿಸುವ ಕುರಿತಂತೆ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಒಇ 147 ಪೊಸಿಅ 2010 ಬೆಂಗಳೂರು, ದಿನಾಂಕ: 14.08.2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಎಸ್. ಶಿವಣ್ಣನವರ, ಸಿಪಿಸಿ–945, ಬ್ಯಾಡಗಿ ಪೊಲೀಸ್ ಠಾಣೆ, ಹಾಲಿ ರಾಜ್ಯ ಗುಪ್ತ ವಾರ್ತೆ, ಹಾವೇರಿ ಜಿಲ್ಲೆ ಇವರಿಗೆ ಶಿಸ್ತು ಪ್ರಾಧಿಕಾರವು ವಿಧಿಸಿರುವ ದಂಡನಾದೇಶವನ್ನು ಮಾರ್ಪಡಿಸಿ ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷದ ಅವಧಿಗೆ ಮುಂಬರುವ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಮುಂದೂಡಿ ಹಾಗೂ ಅವರ ಅಮಾನತ್ತಿನ ಅವಧಿಯನ್ನು ಅವರ ಹಕ್ಕಿನಲ್ಲಿರುವ ರಜೆ ಎಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ದೇವೇಂದ್ರಪ್ಪ ಕಟ್ಟಿಮನಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–ಬಿ)

PR-709

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಒಳಾಡಳಿತ ಸಚಿವಾಲಯ

ವಿಷಯ : ದಿನಾಂಕ: 05.07.2014ರಂದು ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಕೂಡಗಿ ಗ್ರಾಮದಲ್ಲಿ ಎನ್‌ಟಿಪಿಸಿ ಆವರಣದಲ್ಲಿ ನಡೆದ ಗುಂಪು ಘರ್ಷಣೆಯಲ್ಲಿ ಗಾಯಗೊಂಡ ಸಾರ್ವಜನಿಕರಿಗೆ ಪರಿಹಾರ ನೀಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 10 ಪಿಸಿಇ 2014; ದಿ: 05.07.2014

2. ಪೊಲೀಸ್ ಉಪ ವಿಭಾಗಾಧಿಕಾರಿ, ಬಸವನಬಾಗೇವಾಡಿ, ಬಿಜಾಪುರ ಜಿಲ್ಲೆ ಇವರ ಪತ್ರ ಸಂ: ಡಿಎಸ್‌ಬಿ/ ಬ.ಬಾಗೇವಾಡಿ/1147/2014; ದಿ: 17.07.2014

ಪ್ರಸ್ತಾವನೆ :

ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಕೂಡಗಿ ಗ್ರಾಮದಲ್ಲಿ ಕಲ್ಲಿದ್ದಲು ಉಷ್ಣ ವಿದ್ಯುತ್ ಸ್ಥಾವರ ನಿರ್ಮಾಣ ವಿರೋಧಿಸಿ ದಿನಾಂಕ: 05.07.2014ರಂದು ರೈತರು ನಡೆಸಿದ ಪ್ರತಿಭಟನೆಯು ಹಿಂಸಾರೂಪಕ್ಕೆ ತಿರುಗಿ ರೈತರು ಗುಂಡೇಟಿನಿಂದ ಗಾಯಗೊಂಡ ಪ್ರಕರಣವನ್ನು ಜಿಲ್ಲಾಧಿಕಾರಿ, ಬಿಜಾಪುರ ಜಿಲ್ಲೆ ಇವರಿಂದ ಮೆಜಿಸ್ಟೀರಿಯಲ್ ತನಿಖೆ ನಡೆಸಲು ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸೂಚಿಸಲಾಯಿತು. ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಸದರಿ ಗುಂಪು ಘರ್ಷಣೆಯಲ್ಲಿ ಗಾಯಗೊಂಡ ಸಾರ್ವಜನಿಕರ ವಿವರಗಳನ್ನು ಉಪ ಪೊಲೀಸ್ ಅಧೀಕ್ಷಕರು, ಬಸವನಬಾಗೇವಾಡಿರವರು ಸಲ್ಲಿಸಿರುತ್ತಾರೆ. ವಿವರ ಈ ಕೆಳಕಂಡಂತಿದೆ.

ಗುಂಡಿನಿಂದ ಗಾಯಗೊಂಡವರು:

1. ಚಂದ್ರಪ್ಪ ತಂ. ಹಾಲಪ್ಪ ಶೇಡಿ, ಸಾ: ಮುತ್ತಗಿ
2. ಸದಾಶಿವ ತಂ. ಮಲ್ಲಯ್ಯ ಗಣಾಚಾರಿ, ಸಾ: ಮಸೂತಿ

} ತಲಾ ಒಂದು ಲಕ್ಷ ರೂಪಾಯಿಗಳು

ಇತರೆ ಗಾಯಗೊಂಡವರು:

1. ಸುರೇಶಬಾಬು ತಂ. ಕಾಳಪ್ಪ ಬಡಿಗೇರ, ಸಾ: ಮಸೂತಿ
2. ಶರಣಮ್ಮ ಗಂ. ದುಂಡಪ್ಪ ಕುಂಬಾರ, ಸಾ: ಕವಲಗಿ
3. ಮಲ್ಲಮ್ಮ ಗಂ. ಬಸಪ್ಪ ಬೆಲ್ಲದ, ಸಾ: ಮುತ್ತಗಿ
4. ಕಲಾವತಿ ಗಂ. ಯಮನಪ್ಪ, ಸಾ: ಮುತ್ತಗಿ
5. ಶಿವಾನಂದ ದೇಶಪಾಂಡೆ, ಸಾ: ಮುತ್ತಗಿ
6. ಬಸವರಾಜ, ಚಿಮ್ಮಲಗಿ, ಸಾ: ಮುತ್ತಗಿ
7. ಸಂಗಪ್ಪ ಹಣಮಪ್ಪ ಹೂಗಾರ, ಸಾ: ಮಸೂತಿ
8. ಯಮನವ್ವ ಗಂ. ಶಾಂತಪ್ಪ ಸಾ: ಮುತ್ತಗಿ

} ತಲಾ ಇಪ್ಪತ್ತೈದು ಸಾವಿರಗಳು

ಸದರಿ ಪ್ರಕರಣದಲ್ಲಿ ಸಂತ್ರಸ್ತರಿಗೆ ಪರಿಹಾರ ನೀಡಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 10 ಪಿಸಿಇ 2014 ಬೆಂಗಳೂರು, ದಿನಾಂಕ: 20.08.2014

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಕೂಡಗಿ ಗ್ರಾಮದಲ್ಲಿ ಕಲ್ಲಿದ್ದಲು ಉಷ್ಣ ವಿದ್ಯುತ್ ಸ್ಥಾವರ ನಿರ್ಮಾಣ ವಿರೋಧಿಸಿ ದಿನಾಂಕ: 05.07.2014ರಂದು ನಡೆದ ಗುಂಪು ಘರ್ಷಣೆಯಲ್ಲಿ ಗಾಯಗೊಂಡವರಿಗೆ ಅವರುಗಳ ಹೆಸರಿನ ಮುಂದೆ ತೋರಿಸಿದಂತೆ ಪರಿಹಾರ ನೀಡಲು ಸರ್ಕಾರವು ತೀರ್ಮಾನಿಸಿದೆ.

ಗುಂಡಿನಿಂದ ಗಾಯಗೊಂಡವರು:

1. ಚಂದ್ರಪ್ಪ ತಂ. ಹಾಲಪ್ಪ ಶೇಡಿ, ಸಾ: ಮುತ್ತಗಿ
2. ಸದಾಶಿವ ತಂ. ಮಲ್ಲಯ್ಯ ಗಣಾಚಾರಿ, ಸಾ: ಮಸೂತಿ

} ತಲಾ ಒಂದು ಲಕ್ಷ ರೂಪಾಯಿಗಳು

ಇತರೆ ಗಾಯಗೊಂಡವರು:

1. ಸುರೇಶಬಾಬು ತಂ. ಕಾಳಪ್ಪ ಬಡಿಗೇರ, ಸಾ: ಮಸೂತಿ
2. ಶರಣಮ್ಮ ಗಂ. ದುಂಡಪ್ಪ ಕುಂಬಾರ, ಸಾ: ಕವಲಗಿ
3. ಮಲ್ಲಮ್ಮ ಗಂ. ಬಸಪ್ಪ ಬೆಲ್ಲದ, ಸಾ: ಮುತ್ತಗಿ
4. ಕಲಾವತಿ ಗಂ. ಯಮನಪ್ಪ, ಸಾ: ಮುತ್ತಗಿ
5. ಶಿವಾನಂದ ದೇಶಪಾಂಡೆ, ಸಾ: ಮುತ್ತಗಿ
6. ಬಸವರಾಜ, ಚಿಮ್ಮಲಗಿ, ಸಾ: ಮುತ್ತಗಿ
7. ಸಂಗಪ್ಪ ಹಣಮಪ್ಪ ಹೂಗಾರ, ಸಾ: ಮಸೂತಿ
8. ಯಮನವ್ವ ಗಂ. ಶಾಂತಪ್ಪ ಸಾ: ಮುತ್ತಗಿ

} ತಲಾ ಇಪ್ಪತ್ತೈದು ಸಾವಿರಗಳು

ಸದರಿ ಪರಿಹಾರ ಮೊತ್ತವನ್ನು 2014–15ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ "2235–60–200–3–01–100"ರ ಯೋಜನೇತರ ಅಡಿಯಲ್ಲಿ ಭರಿಸತಕ್ಕದ್ದು. ಜಿಲ್ಲಾಧಿಕಾರಿ, ಬಿಜಾಪುರ ಜಿಲ್ಲೆರವರು ಪರಿಹಾರದ ಮೊತ್ತವನ್ನು ವಿತರಿಸಲು ಕ್ರಮ ಕೈಗೊಳ್ಳತಕ್ಕದ್ದು. ಬಟವಾಡೆ ಮಾಡಿದ ನಂತರ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸುವುದು.

ಈ ಆದೇಶವನ್ನು ಮಾನ್ಯ ಮುಖ್ಯಮಂತ್ರಿಯವರ ಆದೇಶ ಸಂಖ್ಯೆ: ಪಿಎಸ್‌ಸಿಎಂಎಫ್/3669/2014; ದಿ: 28.07.2014ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋವಿಂದಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಕಾನೂನು & ಸುವ್ಯವಸ್ಥೆ)

PR-710
SC - 50

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59